# <u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ</u>
# <u>ಚನ್ನಪಟ್ಟಣ</u>

C C No. 1093/2016

CW. 1 PW.1

**ಹೆಸರು : ಶಾಹೀದ್ ಖಾನ್**
**ತಂದೆ/ಗಂಡ : ಕರೀಮ್ ಖಾನ್**
**ವಯಸ್ಸು : 25 ವರ್ಷ**
**ಉದ್ಯೋಗ : ವ್ಯಾಪಾರ**
**ವಾಸ : ಚನ್ನಪಟ್ಟಣ.**

ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿ.11.01.2019.

1. ಮೃತ ಮೊಸೇಬ್ ಖಾನ್ ನನ್ನ ತಾತ. ಅಂದಾಜು 2 ವರ್ಷಗಳ ಹಿಂದೆ ಸಂಜೆ 5.00 ಗಂಟೆ ಸಮಯದಲ್ಲಿ ನನ್ನ ಅಜ್ಜನನ್ನು ಮ್ಯಾಕ್ಸೊರೋ ದ್ವಿ ಚಕ್ರ ವಾಹನದಲ್ಲಿ ಮದೀನ ಚೌಕ್ ರಸ್ತೆಯ ಲಕ್ಷ್ಮಿ ಅಸ್ಪತ್ರೆ ಬಳಿ ಬರುತ್ತಿದ್ದಾಗ ಒಬ್ಬ ವ್ಯಕ್ತಿ ಒಂದು ಹಿರೋ ಹೋಂಡಾ ಬೈಕ್ ನಿಂದ ನನ್ನ ಬೈಕಿಗೆ ಅಪಘಾತ ಪಡಿಸಿರುತ್ತಾನೆ ಇದರಿಂದ ನನ್ನ ತಾತನ ಬಲಗಾಲಿಗೆ ಪೆಟ್ಟಾಗಿರುತ್ತದೇ. ನನ್ನ ತಾತನನನ್ನು ಚನ್ನಪಟ್ಟಣದ ಸರ್ಕಾರಿ ಅಸ್ಪತ್ರೆ ಗೆ ದಾಖಲಿ ನಂತರ ಮಂಡ್ಯದ ಸರ್ಕಾರಿ ಅಸ್ಪತ್ರೆ ಗೆ ದಾಖಲಿಸಿ ತದನಂತರ ಹೆಚ್ಚಿನ ಚಿಕಿತ್ಸೆ ಗೆ ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ದಾಖಲಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಲಕಾರಿಯಾಗದೇ 12 ದಿನಗಳ ನಂತರ ನನ್ನ ತಾತ ಮೃತರಾಗಿರುತ್ತಾರೆ.

2. ಅಪಘಾತವಾಗಿ 2 ದಿನಗಳ ನಂತರ ದೂರನ್ನು ದಾಖಲಿಸಿರುತ್ತೇನೆ ಈಗ ನೋಡುತ್ತಿರುವ ದಾಖಲೆಯೇ ನಾನು ನೀಡಿದ ದೂರು ಇದರಲ್ಲಿ ನನ್ನ ಸಹಿ ಇದೆ. ದೂರನ್ನು **<u>ನಿಪಿ-1</u>** ಎಂದು ಸಾಕ್ಷಿಯ ಸಹಿಯನ್ನು **<u>ನಿಪಿ-1(ಎ)</u>** ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ ಸದರಿ ದಾಖಲೆ ಸ್ಥಳ ಪಂಚನಾಮೆ ಯಾಗಿರುತ್ತದೆ. ಇದನ್ನು **<u>ನಿಪಿ-2</u>** ಎಂದು ಸಾಕ್ಷಿಯ ಸಹಿಯನ್ನು **<u>ನಿಪಿ-2(ಎ)</u>** ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು

ನಾನು ಪೋಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ.

3. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ ಇದು ಅಮಾನತ್ತು ಪಂಚನಾಮೆ ಆಗಿರುತ್ತದೆ ಇದನ್ನು **ನಿಪಿ-3** ಎಂದು ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ನಿಪಿ-3 ರ ಕಾಲಕ್ಕೆ ಪೋಲೀಸರು ನನ್ನ ಸಮಕ್ಷಮ ಯಾವುದೇ ವಾಹನಗಳನ್ನುಅ ಮಾನತ್ತು ಪಡಿಸಿಕೊಂಡಿರುವುದಿಲ್ಲ.

4. ಅಪಘಾತ ಪಡಿಸಿದ ವಾಹನವನ್ನು ಹಾಗೂ ಆರೋಪಿಯನ್ನು ನಾನು ಗುರುತಿಸಲು ಸಾದ್ಯವಿಲ್ಲ ನಿಪಿ-2 ಹಾಗೂ 3 ರಲ್ಲಿ ಎನು ಬರೆದಿದೆ ಎಂದು ಗೊತ್ತಿಲ್ಲ.

**ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾರ್ಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಲಾಯಿತು. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾರ್ಟೀ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾರ್ಟೀ ಸವಾಲು ಎ ಪಿ ಪಿ ಯವರಿಂದ**

5. ಅಪಘಾತ ಪಡಿಸಿದ ವಾಹನದ ಸಂಖ್ಯೆ ಕೆಎ-05-ಇಎಫ್1547 ಎಂಬುದಾಗಿ ನಿಪಿ-1 ರಲ್ಲಿ ಬರೆಸಿದ್ದೇನೆ ಎಂದರೆ ಸರಿ. ಸದರಿ ವಾಹನ ವನ್ನು ಅದರ ಚಾಲಕ ಅತಿ ವೇಗ ಮತ್ತು ಅಜಾಗರೂಕತೆಯಿಂದ ಓಡಿಸಿ ಕೊಂಡು ಬಂದು ಎಂದು ಬರೆಸಿದ್ದೇನೆ ಎಂದರೆ ಸರಿ.

6. ನಿಪಿ-1 ನ್ನು ನೀಡಿದ ದಿನಾಂಕವೇ ನಾನು ಸ್ಥಳವನ್ನು ತೋರಿಸಿದ್ದ ಮೇರೆಗೆ ಪೋಲೀಸರು ಘಟನಾ ಸ್ಥಳಕ್ಕೆ ಆ್ಗಮಿಸಿ ನಿಪಿ-2 ರಂತೆ ಮಹಜರು ಕ್ರಮ ಜರುಗಿಸಿದರು ಎಂದರೆ ಸರಿ. ನಿಪಿ-2 ರ ಅಂಶ ತಿಳಿದು ಇದಕ್ಕೆ ನಾನು ಸ್ಥಳದಲ್ಲೆ ಸಹಿ ಮಾಡಿದ್ದೇನೆ ಎಂದರೆ ಸುಳ್ಳು.

7. ದಿ.22.08.2016 ರಂದು ನನ್ನ ಬಾಬ್ತು ವಾಹನವನ್ನು ತನಿಖಾಧಿಕಾರಿ ಸಮಕ್ಷಮ ಹಾಜರುಡಿಪಸಿದ ಮೇರೆಗೆ ಈಗ ಓದಿ ಹೇಳಲಾದ ನಿಪಿ-3 ರಂತೆ ಪಂಚನಾಮ ಕ್ರಮ ಜರುಗಿಸಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

8. ಆರೋಪಿ ಹಾಗೂ ಅವರ ವಾಹನದ ಗುರುತು ಇದ್ದರು ಸಹ ಆರೋಪಿ ನನ್ನ ಮತಬಾಂದವರಾದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸುಳ್ಳು.

**ಪಾರ್ಟೀ ಸವಾಲು ಆರೋಪಿ ಪರ ವಕೀಲರಿಂದಃ**

9. ಪಿಡಬ್ಲ್ಯೂ ವೃತ್ತದಿಂದ ಮದೀನ್ ಚೌಕ್ ಗೆ ಹೋಗಬೇಕಾದರೆ ಇಳಿಜಾರು ಇದೆ ಎಂದರೆ ಸರಿ. ಆ ಸಂದರ್ಬದಲ್ಲಿ ಲಕ್ಷ್ಮಿ ಆಸ್ಪತ್ರೆಯ ಬಳಿ ಒಂದು ರಸ್ತೆ ಉಬ್ಬು ಇತ್ತು ಎಂದರೆ ಸರಿ. ಸದರಿ ರಸ್ತೆಯ ಉಬ್ಬು ಬಳಿ ನಾನು ಬ್ರೇಕ್ ಹಾಕಿದ್ದೆ ಎಂದರೆ ಸರಿ. ಸದರಿ ಬ್ರೇಕ್ ಹಾಕಿದ ಕಾರಣ ನನ್ನ ತಪ್ಪಿನಿಂದ ಈ ಅಪಘಾತವಾಗಿದೆ ಎಂದರೆ ಸುಳ್ಳು.

10. ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಿಪಿ-4 ರಂತೆ ಪೋಲೀಸರು ಯಾವುದೇ ಪಂಚನಾಮ ಕ್ರಮ ಜರುಗಿಸಿಲ್ಲ ಎಂದರೆ ಸುಳ್ಳು. ಸದರಿ ಅಪಘಾತ ನನ್ನ ತಪ್ಪಿದಿಂದ ಆಗಿದ್ದರು ಸಹ ಹೆಚಿಚನ ಪರಿಹಾರಕ್ಕೊಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**